ಸಚಿವರು ಕೆಲವರನ್ನು ಬಿಟ್ಟರೆ ಎಲ್ಲರೂ ಇಂಗ್ಲೀಷ್‌ನಲ್ಲಿ ಬರೆಯುವವರೇ ಆಗಿದ್ದಾರೆ ಮಾನ್ಯ ಜಾರ್ಜ್ ಅವರ ಬಗ್ಗೆ ನಾನು ಮಾತ ಮಾಡಿದ್ದೇನೆ. ಕನ್ನಡದಲ್ಲಿ ಸ್ಪಷ್ಟವಾಗಿ ಮಾತನಾಡತಕ್ಕ ನೀತಿಯನ್ನು ಅವರು ಹೊಂದಿದ್ದಾರೆ ಸರ್ಕಾರಕ್ಕೆ ನಾವೇನು ಹೇಳಿಕೊಡಬೇಕಾಗಿಲ್ಲ. ಅವರೇ ಸತ್ಸಂಪ್ರದಾಯಗಳನ್ನು ಹಾಕಿಕೊಂಡು ಜಾರಿಗೆ ತರಬೇಕು.

ಸರ್ಕಾರದ ನೀತಿ ಕನ್ನಡ. ಇವತ್ತು ಸಂಬಂಧಪಟ್ಟ ಸಚಿವರು ಇಲ್ಲಿ ಬಂದಿಲ್ಲ. ಇದೇ ರೀತಿ ನಾವು ಇಲ್ಲಿ ಯಾವಾಗಲೂ ಮಾತನಾಡಿ ಕಾಲಕಳೆದುಕೊಂಡರೆ ಅದು ಒಳ್ಳೆಯದಲ್ಲ. ಆದ್ದರಿಂದ ಈ ಬಗ್ಗೆ ತಮ್ಮ ಸರ್ಕಾರದ ನೀತಿ ಏನು ಎಂಬುದು ತೀರ್ಮಾನವಾಗಬೇಕು. ನನಗೆ ಎಷ್ಟು ನೋವಾಗುತ್ತದೆಂದರೆ ಈ ಸಭೆಯಲ್ಲಿ ಶಾಸಕಾಂಗದವರು ಕಳುಹಿಸಿರತಕ್ಕ ಕಾಗದ ಇಂಗ್ಲೀಷಿನಲ್ಲಿದೆ. ನಾನು ಅಧ್ಯಕ್ಷರಿಗೆ ಹೇಳಿದ್ದೇನೆ ನನ್ನ ಗಮನ ಸೆಳೆಯುವ ಸೂಚನೆ ಕನ್ನಡದಲ್ಲಿದೆ. ನಿಲುವಳಿ ಸೂಚನೆ ಕಳುಹಿಸುವುದಕ್ಕೆ ನಿಲುವಳಿ ಸೂಚನೆ ಪತ್ರ ಕೇಳಿದರೆ ಅದು ಇಂಗ್ಲೀಷಿನಲ್ಲಿದೆ. ಕನ್ನಡದಲ್ಲಿ ಕೊಡಿ ಎಂದರೆ ಆದಿನ್ನೂ ಮುದ್ರಣವಾಗಿ ಬಂದಿಲ್ಲ ಎಂದು ಹೇಳುತ್ತಾರೆ. ಇಷ್ಟೊಂದು ಅಪಮಾನ ಕನ್ನಡದ ಬಗ್ಗೆ ಸರ್ಕಾರ ತೋರತಕ್ಕದ್ದು ಸರಿಯಲ್ಲ. ನಾನು ಹೇಳುವುದಿಷ್ಟೆ : ಸಾಮಾನ್ಯ ಮಂಡಲ ಪಂಚಾಯತಿಯಿಂದ ಹಿಡಿದು ವಿಧಾನಸಭೆಯವರೆಗೂ ಕನ್ನಡದಲ್ಲೇ ಆಡಳಿತ ನಡೆಸಬೇಕು ಎಂದು ಸರ್ಕಾರ ನಿರ್ಧಾರ ಮಾಡಿದೆ. ಆದ್ದರಿಂದ ಮಾನ್ಯ ಅಧ್ಯಕ್ಷರಿಗೆ ಹೇಳುತ್ತೇನೆ ನಾನು ಕನ್ನಡದಲ್ಲಿ ಪತ್ರ ಕೊಟ್ಟರೆ ಇಂಗ್ಲೀಷಿನಲ್ಲಿ ನನಗೆ ಉತ್ತರ ಕೊಡುವುದು ಸರಿಯಲ್ಲ. ಇದನ್ನು ತಾವು ನೋಡಿ ಪರಿಶೀಲನೆ ಮಾಡಬೇಕು ಏನು ಪರಿಸ್ಥಿತಿ ಇದೆ ಎಂದು ತಾವು ನೋಡಬೇಕು. ಪ್ರತಿಸಾರಿ ನಾನು ಕನ್ನಡದಲ್ಲಿ ಪರದಿಗಳನ್ನು ಕೊಡಿ ಎಂದು ಹೇಳುತ್ತಿದ್ದೇನೆ. ನಾನು ಅಜೀಜ್ ಸೇಠ್ ಅವರನ್ನು ಈ ಸಂದರ್ಭದಲ್ಲಿ ಅಭಿನಂದಿಸುತ್ತೇನೆ. ಏಕೆಂದರೆ ಬಹಳ ಕಷ್ಟಪಟ್ಟು ಕನ್ನಡದಲ್ಲಿ ಮಾತನಾಡುತ್ತಾರೆ. ಸ್ವಲ್ಪ ಯದ್ವಾತದ್ವಾ ಮಾತನಾಡಬಹುದು. ನಾವೇನೂ ಅವರಿಗೆ ವ್ಯಾಕರಣಬದ್ಧವಾಗಿ ಪುಂಖಾನುಪುಂಖವಾಗಿ ಮಾತನಾಡಬೇಕು ಎಂದು ಹೇಳುವುದಿಲ್ಲ. ಸಮಗ್ರವಾಗಿ ಕನ್ನಡದಲ್ಲಿ ಮಾತನಾಡಬೇಕಾದ ಅಭಿಮಾನವನ್ನು ಎಲ್ಲರೂ ಬೆಳೆಸಿಕೊಳ್ಳಬೇಕು. ಆದ್ದರಿಂದ ನನಗೆ ಇಂಗ್ಲೀಷಿನಲ್ಲಿ ಬಂದಿರುವ ಪರದಿಯನ್ನು ಹರಿದು ಬಿಸಾಕುತ್ತಿದ್ದೇವೆ. ಇಂಗ್ಲೀಷ್ ಪರದಿಯನ್ನು ಯಾವುದೇ ಇಲಾಖೆಯವರು ಕೊಡಬಾರದು. ಶೇಕಡ ೭೦-೭೫ ಭಾಗ ಅಧಿಕಾರಿಗಳು ಇಂಗ್ಲೀಷ್ ಪರ ಇದ್ದಾರೆ. ಕನ್ನಡದ ಪರ ಇಲ್ಲ. ಆದ್ದರಿಂದ ಕನ್ನಡವನ್ನು ಐ.ಎ.ಎಸ್. ಅಧಿಕಾರಿಗಳಿಗೆ ಕಲಿಸತಕ್ಕ ಕೆಲಸ ಮೊದಲು ಆಗಬೇಕಾಗಿದೆ. ಇದು ಸರಿಯಾದ ನೀತಿ ಅಲ್ಲ ಎಂದು ಈ ಸಭೆ ಮೂಲಕ ತಿಳಿಸುತ್ತಿದ್ದೇನೆ. ಸರ್ಕಾರದ ನೀತಿಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಉಪಾಧ್ಯಕ್ಷರು.— ಮಾನ್ಯ ವಿಕಾಂತಯ್ಯನವರು ವಿವಿಧ ಇಲಾಖೆಗಳ ವರದಿ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಈ ದಿನದ ಡಿಮ್ಯಾಂಡ್ಸ್ ಮೇಲಿನ ವರದಿ ಇವತ್ತು ತಾನೇ ಬಂದಿದೆ ಎಂದು ಹೇಳಿದ್ದಾರೆ. ನಾನು ಸರ್ಕಾರದ ಗಮನಕ್ಕೆ ತರುತ್ತೇನೆ. ಈ ರೀತಿಯಾಗಿ ಮಾಡದೆ ಆದಷ್ಟು ಬೇಗ ವರದಿಗಳನ್ನು ಸದಸ್ಯರಿಗೆ ಕಳುಹಿಸಿದರೆ ಅವರು ಅದರ ಬಗ್ಗೆ ಅಭ್ಯಾಸ ಮಾಡಿ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ ಎಂಬ ಮಾತನ್ನು ಹೇಳುತ್ತೇನೆ.

SRI AZEEZ SAIT .— Reports naturally sometimes, have been delayed even in Parliament, even in Assembly. ಸದಸ್ಯರು ಹೇಳುವ ಪ್ರಕಾರ ಮುಖ್ಯ ಮಂತ್ರಿಗಳ ಗಮನಕ್ಕೆ ಇದನ್ನು ತಂದು ಮುಂದೆ ಡಿಲೇ ಆಗದ ರೀತಿ ನೋಡಿಕೊಳ್ಳುತ್ತೇವೆ.

ಶ್ರೀ ಎಚ್. ವಿಕಾಂತಯ್ಯ.— ಎಲ್ಲಿಯವರೆಗೆ ವಾರ್ಷಿಕ ವರದಿ ಕೊಡುವುದಿಲ್ಲ ಅಲ್ಲಿಯವರೆಗೆ ಚರ್ಚೆ ನಡೆಯಬಾರದು. ಇಲ್ಲಿ ೧೭ ಬೇಡಿಕೆಗಳಿವೆ. ಇದರ ಬಗ್ಗೆ ವಾರ್ಷಿಕ ವರದಿಯನ್ನು ಕೊಡದೇ ಇದ್ದರೆ ಚರ್ಚೆ ಅರ್ಥ ಪೂರ್ಣವೆನಿಸುವುದಿಲ್ಲ. ವರದಿ ಕೊಟ್ಟ ಮೇಲೆ ಚರ್ಚೆ ಆಗಲಿ.

ಶ್ರೀ ಬಿ. ಎಸ್. ಯಡಿಯೂರಪ್ಪ.— ಉಪಾಧ್ಯಕ್ಷರೆ, ನಾನು ಒಂದು ಮಾತನ್ನು ಹೇಳುತ್ತೇನೆ.

ಶ್ರೀ ಆರ್. ವಿ. ದೇಶಪಾಂಡೆ.— ವಾರ್ಷಿಕ ವರದಿ ಇಲ್ಲ ಎಂದರೆ ಹೇಗೆ ಚರ್ಚೆ ಮಾಡಬೇಕು ? ಸರ್ಕಾರಕ್ಕೆ ತೊಂದರೆ ಇರುತ್ತದೆ, ಒಪ್ಪಿಕೊಳ್ಳುತ್ತೇನೆ. ಸರ್ಕಾರ ನಿನ್ನೆಯೇ ವರದಿಯನ್ನು ಕೊಡಬಹುದಾಗಿತ್ತು. ನಾನು ಸರ್ಕಾರಕ್ಕೆ ರಿಕ್ವೆಸ್ಟ್ ಮಾಡುತ್ತೇನೆ, ಯಾವುದೇ ಡಿಮ್ಯಾಂಡ್ ಬಂದಾಗ ಅದರ ಬಗ್ಗೆ ವರದಿಯನ್ನು ಅದೇ ದಿನ ಕೊಟ್ಟರೆ ಕಷ್ಟವಾಗುತ್ತದೆ. ಮುಂಚಿತವಾಗಿ ಕೊಡಬೇಕು.